ಆತ ಕನಿಕರದಿಂದ ನಗುತ್ತಿದ್ದನು. ನಿರಾಕಾರ ನಿರ್ಗುಣಬ್ರಹ್ಮನ ಧ್ಯಾನದಲ್ಲಿ ಮಗ್ನನಾಗಿರುತ್ತಿದ್ದ ಆತ, ಶಕ್ತಿಯ ವಿಚಾರವಾಗಿ ನಿರಾಸಕ್ತನಾಗಿದ್ದನು. ತಂತ್ರಸಾಧಕಿ ಭೈರವಿ ಬ್ರಾಹ್ಮಣಿಯು, ಶ್ರೀರಾಮಕೃಷ್ಣರು ತೋತಾಪುರಿಯೊಂದಿಗೆ ಅದ್ವೈತಸಾಧನೆ ಮಾಡಲು ಹೊರಟಿರುವುದನ್ನು ಕಂಡು ಅವರಿಗೆ ಎಚ್ಚರಿಕೆ ನೀಡಿದಳು, "ಮಗು, ಆ ಅದ್ವೈತವಾದಿಗಳೊಂದಿಗೆ ಹೆಚ್ಚು ಬೆರೆಯಬೇಡ. ನಿನ್ನ ಭಕ್ತಿ ಒಣಗಿ ಹೋಗಿಬಿಡುತ್ತದೆ" ಎಂದು. ಕಡೆಯಲ್ಲಿ, ಇವರಿಬ್ಬರೂ ಶ್ರೀರಾಮಕೃಷ್ಣರ ಉದಾರ ಆಧ್ಯಾತ್ಮಿಕ ಭಾವದ ಪ್ರಭಾವಕ್ಕೆ ಸಿಕ್ಕು ಪೂರ್ಣದೃಷ್ಟಿಯನ್ನು ಪಡೆದರು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ಇಲ್ಲಿಯ (ನನ್ನ) ಅನುಭವಗಳು ವೇದವೇದಾಂತದಲ್ಲಿ ಏನು ಬರೆದಿದೆಯೋ ಅವುಗಳನ್ನೂ ಮೀರಿರುತ್ತವೆ" ಎಂದು.

ಸ್ವಾಮಿ ಶಾರದಾನಂದರು ತಮ್ಮ ಮಹಾನ್ ಗ್ರಂಥವಾದ, 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿ ಹೀಗೆ ಬರೆಯುತ್ತಾರೆ: "ಶ್ರೀರಾಮಕೃಷ್ಣರು ವಸ್ತುಗಳನ್ನು, ವ್ಯಕ್ತಿಗಳನ್ನು ನಾವು ಅವುಗಳನ್ನು ನೋಡುವಂತೆ ನೋಡುತ್ತಿರಲಿಲ್ಲ. ಪ್ರತಿಯೊಂದು ಜೀವಿಯಲ್ಲಿಯೂ ಅಖಂಡ ಸಚ್ಚಿದಾನಂದವು ವಿರಾಜಿಸುವುದನ್ನು ಅವರು ಕಾಣುತ್ತಿದ್ದರು..." "ಶಿವಜ್ಞಾನದಲ್ಲಿ ಜೀವಿಗಳ ಸೇವೆ ಮಾಡಬೇಕು" ಎಂಬ ಅವರ ಮಾತು ಒಂದು ಹೊಸ ಸಾಧನೆಯ ಮಾರ್ಗವನ್ನೇ ತೆರೆಯಿತು. ಇದನ್ನೇ 'ಅನುಷ್ಠಾನ ವೇದಾಂತ'ವೆಂದು ಸ್ವಾಮಿ ವಿವೇಕಾನಂದರು ಪ್ರಚಾರ ಮಾಡಿದರು.

"ಅದ್ವೈತ ಜ್ಞಾನವನ್ನು ನಿನ್ನ ಬಟ್ಟೆಯ ಅಂಚಿನಲ್ಲಿ ಕಟ್ಟಿಕೊಂಡು ಏನು ಬೇಕಾದರೂ ಮಾಡು" ಎನ್ನುತ್ತಿದ್ದರು ಶ್ರೀರಾಮಕೃಷ್ಣರು. ಅದ್ವೈತದ ಅನುಭೂತಿ ದೂರದ ಮಾತು; ಆದರೆ ಅದ್ವೈತ ಭಾವವನ್ನು ಗ್ರಹಿಸಲು ಸಾಧ್ಯವಾದರೆ ಸಾಕು, ಅನವಶ್ಯಕ ಜಗಳ, ತರ್ಕಗಳಿಂದ ನಮ್ಮ ಮನಸ್ಸು ಮುಕ್ತವಾಗುತ್ತದೆ, ಉದಾರವಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಈ ಭಾವವನ್ನು ಗ್ರಹಿಸಿ ತನ್ನ ಬದುಕನ್ನು ಶ್ರೀಮಂತಗೊಳಿಸಿಕೊಳ್ಳಲಿ ಎನ್ನುವ ತೀವ್ರ ಆಗ್ರಹವನ್ನು ಶ್ರೀರಾಮಕೃಷ್ಣರ ಜೀವನ ಮತ್ತು ಉಪದೇಶಗಳಲ್ಲಿ ನಾವು ಕಾಣುತ್ತೇವೆ.

## ಶ್ರೀರಾಮಕೃಷ್ಣರ ವೇದಾಂತ ಶಿಕ್ಷಣ

ವೇದಾಂತ ಗ್ರಂಥಗಳನ್ನು ಓದುವುದರಲ್ಲಿ ನಿರತನಾದ ಒಬ್ಬ ಶಿಷ್ಯನಿಗೆ ಶ್ರೀಗುರುದೇವರು ಈ ರೀತಿ ಹೇಳಿದರು: "ಏನು ಮಗು, ವೇದಾಂತದ ರಹಸ್ಯವನ್ನು ವಿಚಾರಿಸುವುದರಲ್ಲಿ ಈಗ ನಿರತನಾಗಿರುವೆಯಲ್ಲವೇ? ಬಹಳ ಒಳ್ಳೆಯದು. ಬ್ರಹ್ಮ ಒಂದೇ ಸತ್ಯ, ಜಗತ್ತು ಮಿಥ್ಯವೆಂಬುದಲ್ಲವೆ ಎಲ್ಲಾ ವೇದಾಂತಗಳ ಬೋಧನೆಯ ಸಾರ ಅಥವಾ ಇದಕ್ಕಿಂತ ಹೆಚ್ಚಾಗಿ ಏನಾದರೂ ಇದೆಯೇ?" ತರುಣ ಶಿಷ್ಯನು ಇದೇ ಸರ್ವಸ್ವವೆಂದು ಒಪ್ಪಿಕೊಂಡನು. ಶ್ರೀಗುರುದೇವರ ವಾಣಿ ವೇದಾಂತದ ಸತ್ಯದ ಮೇಲೆ ಒಂದು ಹೊಸ ಬೆಳಕನ್ನು ಕೊಟ್ಟಿತು. ಇದನ್ನು ಕೇಳಿ ಅವನಿಗೆ ಅತ್ಯಾಶ್ಚರ್ಯವಾಯಿತು. ಈ ಸತ್ಯವನ್ನು ಒಬ್ಬ ದೃಢವಾಗಿ ನಂಬಿದರೆ ವೇದಾಂತದ ಸರ್ವಸ್ವವನ್ನೂ ತಿಳಿದುಕೊಳ್ಳಬಹುದೆಂದು ಅವನು ಯೋಚಿಸಿದನು.

ಶ್ರೀಗುರುದೇವರು ಅದನ್ನು ವಿವರಿಸುತ್ತಾ ಹೋದರು: "**ಶ್ರವಣ, ಮನನ, ಧ್ಯಾನ** – ಬ್ರಹ್ಮ ಸತ್ಯ, ಜಗತ್ತು ಮಿಥ್ಯವೆಂಬುದನ್ನು ಮೊದಲು ಕೇಳಬೇಕು. ಅನಂತರ ವಿಚಾರ ಮಾಡಬೇಕು. ಕೇಳಿದುದರ ಸತ್ಯ ವಿಚಾರದಿಂದ ದೃಢವಾಗುವುದು. ಅನಂತರ ಧ್ಯಾನ. ಅಂದರೆ ಮನಸ್ಸನ್ನು ಮಿಥ್ಯಾಜಗತ್ತಿನಿಂದ ಸೆಳೆದು ಸತ್ಯವಾದ ಬ್ರಹ್ಮನ ಮೇಲೆ ಕೇಂದ್ರೀಕರಿಸುವುದು. ವೇದಾಂತ ಶಿಕ್ಷಣದ ಕ್ರಮ ಇದು. ಅದಲ್ಲದೆ ಸತ್ಯವನ್ನು ಸುಮ್ಮನೆ ಕೇಳಿ, ಬುದ್ಧಿಯಿಂದ ಆಲೋಚಿಸಿ, ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸದೇ ಇದ್ದರೆ ಅಂತಹ ಸತ್ಯದಿಂದ ಪ್ರಯೋಜನವೇನು? ಇಂತಹ ಜ್ಞಾನ ಕೇವಲ ಪ್ರಪಂಚದಲ್ಲಿ ಮಾತ್ರ ನಿರತರಾಗಿರುವವರದು. ಸತ್ಯವನ್ನು ತಿಳಿದುಕೊಳ್ಳುವುದಕ್ಕೆ ಇದು ಏನೂ ಸಹಾಯ ಮಾಡಲಾರದು. ದೃಢನಂಬಿಕೆ ಮತ್ತು ವೈರಾಗ್ಯ ಅತ್ಯವಶ್ಯಕ. ಇದರಿಂದ ಮಾತ್ರ ಸತ್ಯವನ್ನು ಪಡೆಯಬಹುದು. ಒಬ್ಬನು ಬರಿಯ ಬಾಯಿಮಾತಿನಿಂದ, 'ಜಗತ್ತು ಅಸತ್ಯ, ಅದೆಂದಿಗೂ ಇಲ್ಲ, ಬ್ರಹ್ಮವೊಂದೇ ಸತ್ಯ'ವೆಂದು ಹೇಳಬಹುದು. ಆದರೆ ವಿಷಯವಸ್ತುಗಳು ಎದುರಿಗೆ ಬಂದೊಡನೆಯೆ ಅದು ಸತ್ಯವೆಂದು ಭ್ರಮಿಸಿ ಅದರ ಪಾಶಕ್ಕೆ ಬೀಳುವನು. ಇವನು ಮುಳ್ಳು ಇಲ್ಲವೆಂದು ಕೂಗುತ್ತಾ ಮುಳ್ಳು ತಾಗಿದೊಡನೆಯೇ ಅರಚುವವನಂತೆ."

"ಒಮ್ಮೆ ಪಂಚವಟಿಗೆ ಒಬ್ಬ ಸಾಧು ಬಂದನು. ಉಳಿದವರೆದುರಿಗೆ ಅವನು ಬಹಳ ವೇದಾಂತವನ್ನು ಮಾತನಾಡುತ್ತಿದ್ದನು. ಒಂದು ದಿನ ಅವನು ಒಬ್ಬ ಹೆಂಗಸಿನೊಂದಿಗೆ ನ್ಯಾಯವಿರುದ್ಧವಾದ ಸಂಬಂಧವನ್ನು ಬೆಳೆಸಿದನೆಂದು ನಾನು ಕೇಳಿದೆನು. ಸ್ವಲ್ಪ ಹೊತ್ತಾದ ಮೇಲೆ ನಾನು ಅಲ್ಲಿಗೇ ಹೋದಾಗ ಅವನಿಗೆ, 'ವೇದಾಂತವನ್ನು ಅಷ್ಟು ಚೆನ್ನಾಗಿ ಮಾತನಾಡುವೆಯಲ್ಲಾ? ಜನವೆಲ್ಲಾ ನಿನ್ನ ವಿಚಾರವಾಗಿ ಆಡಿಕೊಳ್ಳುವ ವಿಷಯವೇನು?' ಎಂದು ಕೇಳಿದೆನು. ಅವನು 'ಅದಕ್ಕೇನು? ಅದರಿಂದ ಏನೂ ದೋಷವಿಲ್ಲವೆಂದು ನಾನು ನಿನಗೆ ತೋರಿಸುತ್ತೇನೆ. ಎಲ್ಲಾ ಕಾಲದಲ್ಲಿಯೂ ಜಗತ್ತು ಅಸತ್ಯವಾದರೆ ನನ್ನ ಪತನವೊಂದು ಮಾತ್ರ ಸತ್ಯವಾಗುವುದೋ? ಅದು ಕೂಡ ಅಸತ್ಯ' ಎಂದನು. ಇದನ್ನು ಕೇಳಿ ನಾನು ಬೇಸತ್ತು, 'ಇಂತಹ ವೇದಾಂತ ಜ್ಞಾನದ ಮೇಲೆ ನಾನು ಉಗುಳುವೆನು. ಇದು ನಿಜವಾದ ಜ್ಞಾನವಲ್ಲ. ಬರಿ ನಟನೆ, ಇಂದ್ರಿಯಭೋಗದಲ್ಲಿ ನಿರತರಾದ ಪ್ರಾಪಂಚಿಕರ ಮತ್ತು ಕಪಟಿಗಳ ಸೋಗಿನ ಮಾತು ಇದು' ಎಂದು ಹೇಳಿದೆನು." (ಶ್ರೀರಾಮಕೃಷ್ಣ ಉಪದೇಶಾಮೃತ, ಪು. ೧೭೪, ೧೭೫)

# ಆಧ್ಯಾತ್ಮಿಕ ಜೀವನದ ಪೂರಕ ಮತ್ತು ಮಾರಕ ಅಂಶಗಳು

ಮಾತಾ ತ್ಯಾಗಮಯೀ

"ಮುಖ್ಯವಾಗಿ ಬೇಕಾದದ್ದು ವ್ಯಾಕುಲತೆ, ವ್ಯಾಕುಲತೆ ಉಂಟಾಯಿತು ಎಂದರೆ ಅರುಣೋದಯವಾದ ಹಾಗೆ. ಇನ್ನು ಸೂರ್ಯೋದಯಕ್ಕೆ ತಡವಿಲ್ಲ."

"ಭಗವಂತನನ್ನು ಪ್ರೀತಿಸುವುದು– ಇದೇ ಜೀವನದ ಉದ್ದೇಶ. ಬೃಂದಾವನದ ಗೋಪಗೋಪಿಯರು ಶ್ರೀಕೃಷ್ಣನನ್ನು ಪ್ರೀತಿಸುತ್ತಿದ್ದ ಹಾಗೆ."

"ಅಹಂಕಾರದ ಮೂಲವಿರುವುದು ಎಲ್ಲಿ? ಜ್ಞಾನದಲ್ಲೊ, ಅಜ್ಞಾನದಲ್ಲೊ? ಬ್ರಹ್ಮಜ್ಞಾನಿಯಾದವನಿಗೆ ನಾನು ಶ್ರೀಮಂತ, ನಾನು ಪಂಡಿತ, ನಾನು ಕುಲೀನ ಎಂಬ ಭಾವನೆಗಳು ಉದಿಸಲು ಸಾಧ್ಯವೇ?"

ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಜೀವನಕ್ಕೆ ಸಹಕಾರಿಯಾದದ್ದು ಯಾವುದು, ಮಾರಕವಾಗಿರುವುದು ಯಾವುದು – ಎಲ್ಲವನ್ನೂ ಸಾಧಕನಿಗೆ ಬೋಧಿಸಿದ್ದಾರೆ. ಈ ಅಂಶಗಳನ್ನು ವಿವರವಾಗಿ ನಮಗೆ ಪರಿಚಯ ಮಾಡಿಕೊಟ್ಟಿರುವ ಮಾತಾಜಿಯವರು ಚಳ್ಳಕೆರೆಯಲ್ಲಿರುವ ಶಾರದಾಶ್ರಮದ ಮುಖ್ಯಸ್ಥರು. ಇವರದು ಭಾವಪೂರ್ಣ ಬರವಣಿಗೆ. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಇವರು ಉತ್ತಮ ವಾಗ್ಮಿಗಳು ಕೂಡ.

"ಮಳೆಯ ನೀರು ತಗ್ಗು ಪ್ರದೇಶದಲ್ಲಿ ನಿಂತುಕೊಳ್ಳುತ್ತದೆ. ಎತ್ತರದ ಪ್ರದೇಶದಲ್ಲಲ್ಲ; ಹಾಗೆಯೇ ಭಗವತ್ಕೃಪೆಯ ಜಲವೂ ವಿನಮ್ರವಾದ ಮನಸ್ಸಿನಲ್ಲಿ ನಿಂತುಕೊಳ್ಳುತ್ತದೆ, ಅಹಂಕಾರದ ದಿಣ್ಣೆಯ ಮೇಲಲ್ಲ."

ಶ್ರೀರಾಮಕೃಷ್ಣರ ಸಂದೇಶಗಳಲ್ಲಿ ಆಧ್ಯಾತ್ಮಿಕ ಜೀವನಕ್ಕೆ ಪೂರಕವಾದ ಅಂಶಗಳನ್ನು ಪಡೆಯುವಂತೆ, ಅದಕ್ಕೆ ಮಾರಕವಾದಂತಹ ವಿಷಯಗಳ ಕುರಿತು ಎಚ್ಚರಿಕೆಯ ಗಂಟೆಯನ್ನೂ ಕಾಣಬಹುದು. ಆಧ್ಯಾತ್ಮಿಕ ಜೀವನ ಕಠಿಣ, ಆದರೆ ಭಗವತ್ಕೃಪೆಯಲ್ಲಿ ಶ್ರದ್ಧೆಯಿರಿಸಿ ಮುನ್ನಡೆಯುವುದಾದರೆ ನಮ್ಮ ಜೀವನವನ್ನು ಆನಂದಮಯವಾಗಿಸಿಕೊಳ್ಳಬಹುದು.



## ಆಧ್ಯಾತ್ಮಿಕ ಜೀವನದ ಪೂರಕ ಅಂಶಗಳಾವುವು?

**ಸಾರವಾದುದನ್ನೆ ಅರಸು:** "ಮನುಷ್ಯ ಜೀವನದ ಗುರಿ ಏನು?" ಎಂದು ಪ್ರತಿಯೊಬ್ಬ ವ್ಯಕ್ತಿಯೂ ಯೋಚಿಸಬೇಕು. ಧನಕನಕಗಳ ಸಂಪಾದನೆ, ಕಾಮಸುಖೋಪಭೋಗಗಳೇ ಒಬ್ಬ ವ್ಯಕ್ತಿಯ ಜೀವನದ ಗುರಿಯಾದರೆ ಅಲ್ಲಿ ಏನು ತಾನೆ ಸ್ವಾರಸ್ಯವಿದೆ? ಅವು ಇಂದ್ರಿಯಗಳ ತೇಜಸ್ಸನ್ನು ಹೀರಿ ಹಾಕುತ್ತವೆ, ಅವನನ್ನು ದುಃಖಭಾಜನನನ್ನಾಗಿಸುತ್ತವೆ. ಅವು ಅಸಾರವಾದವುಗಳು. **ಅನಿತ್ಯಮ್ ಅಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್** – "ಈ ಲೋಕ ಅನಿತ್ಯವಾದುದು, ಅಸುಖವಾದುದು. ಇದನ್ನು ಪಡೆದ ಮೇಲೆ ಭಗವಂತನನ್ನು ಭಜಿಸಿದರೆ ಮಾತ್ರ ನಾವು ಸುಖಿಯಾಗಬಲ್ಲೆವು" ಎನ್ನುತ್ತದೆ ಭಗವದ್ಗೀತೆ. "ಈ ಮೂರು ದಿನಗಳ ಜೀವನ ಸರ್ವಸ್ವವಲ್ಲ. ಅದರಾಚೆ ಇದೆ ಅನಂತ ಜೀವನ, ಅನಂತ ಅಸ್ತಿತ್ವ" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಈ ಪರಮಸತ್ಯದ ಅರಸುವಿಕೆಯಲ್ಲಿಯೇ, ಅದರ ಪ್ರಾಪ್ತಿಯಲ್ಲಿಯೇ ಬದುಕಿನ ಸಾರ ಅಡಗಿದೆ.

ಶ್ರೀರಾಮಕೃಷ್ಣರು ಹೇಳುತ್ತಾರೆ, ಸಾರವತ್ತಾದುದನ್ನು ಪಡೆಯುವಲ್ಲಿ ನಾವು ಕಾಮ–ಕಾಂಚನ ತ್ಯಾಗ, ಭಗವತ್ಪ್ರೇಮ, ಅಹಂಕಾರ ನಾಶದ ಕಡೆಗೆ ಪ್ರಧಾನವಾದ ಗಮನವನ್ನು ಕೊಡಬೇಕೇ ಹೊರತು, ಆಹಾರಪದ್ಧತಿ, ಬಟ್ಟೆಬರೆ, ಲೋಕಾಚಾರಗಳು, ಪೂಜಾಪದ್ಧತಿ, ಸಂಪ್ರದಾಯಪರತೆ ಇತ್ಯಾದಿ ಬಾಹ್ಯವಿಧಾನಗಳಿಗಲ್ಲ ಎಂದು. ಸಾಧನಾಮಾರ್ಗದಲ್ಲಿ ನಾವು ಅಗತ್ಯವಿಚಾರಗಳೆಡೆಗೆ ಗಮನ ನೀಡಿ ಅನಗತ್ಯವಾದುವುಗಳನ್ನು ಬಿಟ್ಟುಬಿಡಬೇಕು.

ವ್ಯಕ್ತಿ ಸದ್ವಸ್ತುವನ್ನು ಪಡೆಯುವ ಹಾದಿಯಲ್ಲಿ ಹೋಗುತ್ತಿರುವಾಗ ದಾರಿಯಲ್ಲಿ ಹಲಕೆಲವು ಸಿದ್ಧಿಗಳ, ಪವಾಡಶಕ್ತಿಗಳ, ಮಂತ್ರಶಕ್ತಿಗಳ ಪ್ರಲೋಭನೆಗಳಿಗೆ ಒಳಗಾಗಿ ದಾರಿತಪ್ಪಬಹುದು. ಸತ್ಯದರ್ಶನವೆಂಬ ಶಿಖರವನ್ನೇರುವಾಗ ನಮ್ಮನ್ನು ಬಂಧಿಸಿ

ಹಾಕುವಂತಹ ಗೂಟಗಳು ಅವು ಎನ್ನುತ್ತಾರೆ ಶ್ರೀರಾಮಕೃಷ್ಣರು. ಒಬ್ಬ ವ್ಯಕ್ತಿ ಹತ್ತು ವರ್ಷಗಳ ತಪಸ್ಸಿನಿಂದ ನದಿಯ ಮೇಲೆ ನಡೆಯುವುದನ್ನು ಕಲಿಯಬಹುದು. ಆದರೆ, ದೋಣಿಯವನಿಗೆ ಆರು ರೂಪಾಯಿ ಕೊಟ್ಟರೆ ಅವನು ನಮ್ಮನ್ನು ಇನ್ನೊಂದು ದಡಕ್ಕೆ ತಲುಪಿಸುತ್ತಾನೆ. ಹೀಗಾಗಿ ಅವನ ಸಾಧನೆಯ ಫಲವೆಲ್ಲ ಆರು ರೂಪಾಯಿ ಎಂದಾಯಿತು, ಆದ್ದರಿಂದ ಭಗವತ್ಪ್ರಾಪ್ತಿಯೇ ಜೀವನದಲ್ಲಿ ಸಾರವತ್ತಾದುದು. ಜಗದ ಎಲ್ಲ ತಂಟೆ–ತಕರಾರುಗಳು, ತಾಪತ್ರಯಗಳು ಹಾಗೂ ಅದರ ವೈಭವ–ವಿಲಾಸಗಳ ನಡುವೆಯೂ ಭಗವತ್ ಪ್ರಾಪ್ತಿಯ ಕಡೆಗೆ ಮಾತ್ರವೇ ಗಮನವಿರುವುದಾದರೆ ಮಾತ್ರ, ನಾವು ಆಧ್ಯಾತ್ಮಿಕ ಜೀವನಕ್ಕೆ ಯೋಗ್ಯರು ಎಂದು ಭಾವಿಸಬಹುದು.

**ಭಗವನ್ನಾಮದಲ್ಲಿ ಶ್ರದ್ಧೆ:** ಸಾರವತ್ತಾದುದನ್ನು ಅರಸುವಾಗ ನಮ್ಮ ಹೃದಯ, ಮನಸ್ಸು ಬುದ್ಧಿಗಳನ್ನು ಅದರಿಂದಲೇ ತುಂಬಿಸ ಬೇಕಾದದ್ದು ಅತಿ ಮುಖ್ಯ. ಜಡವಸ್ತುವಿನ ಚಿಂತನೆಯಿಂದ ನಾವು ಜಡರಾಗುತ್ತೇವೆ, ಚೇತನವಸ್ತುವಿನ ಚಿಂತನೆಯಿಂದ ನಾವು ಚೈತನ್ಯ ಸ್ವರೂಪರೇ ಆಗುತ್ತೇವೆ. ಯಾವುದು ನಮ್ಮನ್ನು ಸಂಸಾರಬಂಧನಕ್ಕೆ ಎಳೆದು ತರುವಂತಹುದು? 'ವಿಷಯಾನುರಾಗ'. ಯಾವುದದು ನಮ್ಮನ್ನು ಇಹಲೋಕದಿಂದ, ಸಂಸಾರಬಂಧನದಿಂದ ಪಾರುಗಾಣಿಸಬಲ್ಲದ್ದು? 'ಭಗವನ್ನಾಮದ ಅನುರಾಗ'. ನಾಮಸ್ಮರಣೆಯಿಂದ ನಮ್ಮ ವ್ಯಕ್ತಿತ್ವದ ಸರ್ವಾಂಗವೂ ಪಾವನವಾಗುತ್ತದೆ, ದಿವ್ಯವಾಗುತ್ತದೆ. ಒಂದು ಔಷಧಿಯನ್ನು ಹೇಗೆ ತಯಾರಿಸಲಾಗಿದೆ ಎಂದು ನಮಗೆ ಗೊತ್ತಿಲ್ಲದಿದ್ದರೂ, ಅದರ ಸೇವನೆಯಿಂದ ರೋಗ ವಾಸಿಯಾಗುತ್ತದೆ. ಅದರಂತೆ ಭಗವನ್ನಾಮದ ಶಕ್ತಿಯನ್ನು, ಮಹಿಮೆಯನ್ನು ನಾವು ಅರಿಯದಿದ್ದರೇನಂತೆ; ಭಗವನ್ನಾಮವನ್ನು ಜಪಿಸುತ್ತಾ, ಜಪಿಸುತ್ತಾ, ನಾವು ಭವರೋಗದಿಂದ ಪಾರಾಗುತ್ತೇವೆ, ಅಮೃತರಾಗುತ್ತೇವೆ.

ಶ್ರೀರಾಮಕೃಷ್ಣರು ಹೇಳುತ್ತಾರೆ, "ಸಾಕ್ಷಾತ್ ಪೂರ್ಣಬ್ರಹ್ಮ ಶ್ರೀರಾಮಚಂದ್ರ ಲಂಕೆಗೆ ಹೋಗಲು ಸೇತುವೆ ಕಟ್ಟಬೇಕಾಗಿ ಬಂದಿತು. ಆದರೆ ಹನುಮಂತ ರಾಮನಾಮದಲ್ಲಿ ಶ್ರದ್ಧೆಯಿಟ್ಟು ಒಂದೇ ನೆಗೆತಕ್ಕೆ ಸಮುದ್ರವನ್ನು ದಾಟಿ ಆಚೆ ದಡ ತಲುಪಿದ." ಆದ್ದರಿಂದ ನಾಮದಲ್ಲಿ ಅಚಲ ಶ್ರದ್ಧೆಯಿರಲಿ, ಮಗುವಿನಂತಹ ಸರಳ ಶ್ರದ್ಧೆಯಿರಲಿ. "ನಾನು ಭಗವನ್ನಾಮವನ್ನು ಹೇಳಿದ್ದೇನೆ. ಇನ್ನೆಲ್ಲಿಯ ಪಾಪ ನನಗೆ?" ಎಂದೆನ್ನುವ ಶ್ರದ್ಧೆ ಇರಬೇಕು. ಶ್ರದ್ಧೆ ಎಲ್ಲಿರುವುದೋ ಅಲ್ಲಿ ಭಗವಂತನು ದೊರೆಯುತ್ತಾನೆ. ನಾಮದಲ್ಲಿ ಶ್ರದ್ಧೆಯಿರುವವನ ನಡೆ–ನುಡಿ, ಆಚಾರ–ವಿಚಾರ ಸಂಸ್ಕೃತಿಗಳ ಸ್ತರವೇ ಬೇರೆ, ಶ್ರದ್ಧೆ ಇಲ್ಲದವನ ಸಂಶಯ, ತುಮುಲ, ಚಂಚಲತೆಯ ಮನಃಸ್ಥಿತಿಯೇ ಬೇರೆ. ಆದ್ದರಿಂದ ನಾಮದಲ್ಲಿ ರುಚಿ, ಶ್ರದ್ಧೆ ಇದ್ದರೆ ನಮಗೆ ಸಾಧನೆಯ ಮಾರ್ಗದಲ್ಲಿ ಗಟ್ಟಿಯಾಗಿ ಮುನ್ನಡೆಯಲು ದೃಢವಾದ ಆಸರೆ ದೊರೆಯುತ್ತದೆ.

**ಅಭ್ಯಾಸಯೋಗ: 'ಮನಸೈವೇದಮಾಪ್ತವ್ಯಂ'** – ಆತ್ಮನನ್ನು ಮನಸ್ಸಿನಿಂದಲೇ ಅರಿಯಬೇಕು ಎನ್ನುತ್ತದೆ ಉಪನಿಷತ್ತು. ನಮ್ಮ ಮನಸ್ಸಿನಲ್ಲಿ ಪ್ರಾಪಂಚಿಕ ಪ್ರವೃತ್ತಿಗಳೂ ಇವೆ, ಆಧ್ಯಾತ್ಮಿಕ ಪ್ರವೃತ್ತಿಗಳೂ ಇವೆ. ಅವೆರಡರ ನಡುವೆ ಯಾವಾಗಲೂ ಘರ್ಷಣೆಯಾಗುತ್ತಿರುತ್ತದೆ. ವಿವೇಕಿಯಾದ ನಮ್ಮ ಮನಸ್ಸು ಯಾವ ಪಕ್ಷವನ್ನು ವಹಿಸುತ್ತದೆಯೋ ಅದು ವಿಜಯಿಯಾಗುತ್ತದೆ. ಇಂದಿನ ನಮ್ಮ ಸಂಸಾರಬಂಧನಕ್ಕೆ ಕಾರಣ 'ಮನಸ್ಸು' ಎನ್ನುವುದಾದರೆ, ಸಂಸಾರಾಸಕ್ತಿಯನ್ನು ತೆಗೆದುಹಾಕುವ ಪ್ರಯತ್ನವನ್ನು ಮನಸ್ಸಿನಿಂದಲೇ ಮಾಡಬೇಕಾದುದು ನಮ್ಮ ಕರ್ತವ್ಯ. ಮನಸ್ಸಿನಲ್ಲಿ ಮೀನಿನ ವಾಸನೆಯನ್ನು (ಪ್ರಾಪಂಚಿಕ ಭೋಗಾಸಕ್ತಿಯನ್ನು) ಇಟ್ಟುಕೊಂಡು, ಹೂವಿನ ವಾಸನೆಗಾಗಿ (ಆಧ್ಯಾತ್ಮಿಕ ಯೋಗಕ್ಕಾಗಿ) ಹುಡುಕಿದರೆ, ಅದು ಯಾವತ್ತಾದರೂ ಸಿಗುವ ಸಂಭವವಿದೆಯೆ? ನಾವೇ ಮನಸ್ಸಿನಿಂದ ಸಂಸಾರವೆಂಬ ಮರವನ್ನು ಹಿಡಿದುಕೊಂಡು, 'ಸಂಸಾರವೆಂಬ ಮರ ನನ್ನನ್ನು ಹಿಡಿದುಕೊಂಡಿದೆ' ಎಂದು ದೂರುವುದರಲ್ಲಿ ಯಾವ ಅರ್ಥವಿದೆ? ಆದ್ದರಿಂದ ನಾವು ಸಂಸಾರದಲ್ಲಿದ್ದರೂ ಮನಸ್ಸನ್ನು ಭಗವಂತನಲ್ಲಿ ಹೇಗೆ ಇರಿಸಬಹುದು ಎಂದು ಸತತವೂ ಯೋಚಿಸುತ್ತಿರಬೇಕು. 'ಪುನಃ ಪುನಃ ಮಾಡುವಂತಹ ಪ್ರಯತ್ನದಿಂದ' ಮಾತ್ರವೇ ಇದು ಸಾಧ್ಯವಾಗುವುದು.

ಶ್ರೀಕೃಷ್ಣ ನಮಗೆ ನೆನಪಿಸುತ್ತಾನೆ, **'ಅಭ್ಯಾಸಯೋಗಯುಕ್ತೇನ ಚೇತಸಾ ನಾನ್ಯಗಾಮಿನಾ'** – ಅಭ್ಯಾಸವೆಂಬ ಯೋಗದಿಂದ ಕೂಡಿ, ಮನಸ್ಸನ್ನು ಇನ್ನೊಂದೆಡೆಗೆ ಹೋಗಲು ಬಿಡದೆ ಭಗವಂತನಲ್ಲಿ ಒಲವನ್ನು ಸಾಧಿಸಲು ಪ್ರಯತ್ನಿಸಬೇಕು. ಯಾವ ರೀತಿ? ಎಲ್ಲ ಸಂಸಾರ ಕಾರ್ಯಗಳ ಮಧ್ಯೆಯೂ ಮನಸ್ಸನ್ನು ಭಗವಂತನಲ್ಲಿಡುವ ಪ್ರಯತ್ನವನ್ನು ಮಾಡಬೇಕು. ಹೇಗೆ ಎಂದರೆ ಶ್ರೀರಾಮಕೃಷ್ಣರು ಹೇಳುತ್ತಾರೆ, "ಕಾಮಾರಪುಕುರದ ಬಡಗಿ ಹೆಂಗಸರು ಏಕಕಾಲಕ್ಕೆ ಒರಳಿಗೆ ಭತ್ತವನ್ನು ತಳ್ಳುವುದು, ಗಿರಾಕಿಗಳೊಡನೆ ಮಾತನಾಡುವುದು, ಅವಲಕ್ಕಿಯಾದ ಮೇಲೆ ಒರಳಿನಿಂದ ತೆಗೆಯುವುದು, ಮಗುವನ್ನೆತ್ತಿ ನೋಡಿಕೊಳ್ಳುವುದು–ಎಲ್ಲವನ್ನೂ ಮಾಡುತ್ತಿರುತ್ತಾರೆ. ಆದರೆ ಅವರ ಗಮನವು ಏತದ ಮೊನೆ ಎಲ್ಲಿ ತಮ್ಮ ಕೈಯನ್ನು ಜಜ್ಜಿಬಿಡುವುದೋ ಎಂಬುದರ ಕಡೆಗಿರುತ್ತದೆ." ಇದರಂತೆಯೇ ನಮ್ಮ ಮನಸ್ಸು ಭಗವಂತನ ಕಡೆಯಿರಬೇಕು. ಎಲ್ಲ ಕಾರ್ಯಗಳ ನಡುವೆಯೂ ನಮ್ಮ ಮನಸ್ಸು ಎಂದೆನ್ನುವ ಬಿಳಿಬಟ್ಟೆಗೆ **'ಅಭ್ಯಾಸಯೋಗ'** ಎನ್ನುವ ಬಣ್ಣವನ್ನು ಬಳಿಯಬೇಕು. ನಾವು ಕೊನೆಯವರೆಗೂ ಪ್ರಯತ್ನಶೀಲರಾಗಿರಬೇಕು. ಹಾಗಾದರೆ ಮಾತ್ರ ನಾವು ಗುರಿ ಸೇರುವುದರಲ್ಲಿ ಸಂಶಯವಿಲ್ಲ.

**ವ್ಯಾಕುಲತೆಯೇ ಜೀವಾಳ :** ಪರಮಸತ್ಯಕ್ಕಾಗಿ ನಮ್ಮಲ್ಲೆಷ್ಟು ವ್ಯಾಕುಲತೆ ಇದೆ? ದುಃಖಮಯವಾದ ಸಂಸಾರಬಂಧನದಿಂದ ಪಾರಾಗ ಬೇಕೆಂಬ ತುಡಿತ ನಮ್ಮಲ್ಲೆಷ್ಟು ಇದೆ? ಭಗವದಾನಂದ ಅದೆಷ್ಟು ಅಗಾಧವಾದುದೆಂದರೆ, **'ಸುಖೇನ ಬ್ರಹ್ಮಸಂಸ್ಪರ್ಶಮ್ ಅತ್ಯಂತಂ ಸುಖಮಶ್ನುತೇ'** ಎಂದು ಭಗವದ್ಗೀತೆಯಲ್ಲಿ ಹೇಳಿರುವ ಹಾಗೆ, ಬ್ರಹ್ಮಸಾಕ್ಷಾತ್ಕಾರವು ಆತ್ಯಂತಿಕ ಸುಖವನ್ನು ಕೊಡುತ್ತದೆ. ಅದರ

ಯತ್ಕಿಂಚಿತ್ ಕಲ್ಪನೆ ನಮಗೆ ದೊರೆತರೂ, ನಾವು ಆ ಬ್ರಹ್ಮಸಂಸ್ಪರ್ಶವನ್ನು ಪಡೆಯಲು ಹುಚ್ಚರಾಗದಿರಲು ಸಾಧ್ಯವೇ ಇಲ್ಲ. ಭಗವತ್ ವ್ಯಾಕುಲತೆ ನಮಗೆ ಏಕೆ ಉಂಟಾಗುತ್ತಿಲ್ಲ? ಕಾರಣ 'ಭಗವಂತ ಸತ್ಯ, ಜಗತ್ತು ಮಿಥ್ಯೆ' ಎಂದು ನಾವು ಎಷ್ಟೇ ಓದಿರಬಹುದು, ನಮ್ಮ ಮನಸ್ಸಿನಲ್ಲಿ ಜಗತ್ತು ಸತ್ಯ ಎಂಬ ಭಾವನೆ ಬಲವಾಗಿ ಇದ್ದೇ ಇದೆ. ನಾವು ಸತ್ಯವೆಂದು ಭಾವಿಸುವ ಜಗತ್ತಿನಲ್ಲಿ ನಮಗೆ ಬಹಳಷ್ಟು ಆಸಕ್ತಿಯಿದೆ, ತೃಷ್ಣೆಗಳಿವೆ. ನಮ್ಮ ಮನಸ್ಸಿನಲ್ಲಿ ಬಹಳಷ್ಟು ಅಪವಿತ್ರತೆ ಇದೆ, ಅಹಂಕಾರ ಇದೆ, ಮಲಿನ ಸಂಸ್ಕಾರಶೇಷಗಳಿವೆ. ಹೀಗಾಗಿ ಮನಸ್ಸೆಂಬ ಲೋಹಕ್ಕೆ ಪ್ರಾಪಂಚಿಕತೆ ಎಂಬ ಮಣ್ಣು ಇನ್ನೂ ಮುಚ್ಚಿಕೊಂಡಿರುವುದರಿಂದ ಭಗವಂತನೆಂಬ ಅಯಸ್ಕಾಂತದ ಆಕರ್ಷಣೆ ನಮಗೆ ಇನ್ನೂ ಗೊತ್ತಾಗುತ್ತಿಲ್ಲ.

ಶ್ರೀರಾಮಕೃಷ್ಣರು ಹೇಳುತ್ತಾರೆ, "ತಾಯಿಗೆ ಮಗುವಿನಲ್ಲಿರುವ ಪ್ರೇಮ, ಪ್ರೇಯಸಿಗೆ ತನ್ನ ಪ್ರಿಯತಮನಲ್ಲಿರುವ ಪ್ರೇಮ, ಲೋಭಿಗೆ ತನ್ನ ಹಣದ ಗಂಟಿನ ಮೇಲಿರುವ ಪ್ರೇಮ – ಈ ಮೂರೂ ಪ್ರೇಮಗಳ ಒಟ್ಟು ಮೊತ್ತದಷ್ಟು ಪ್ರಚಂಡಪ್ರೇಮದಿಂದ ಭಗವಂತನಿಗಾಗಿ ಆಸೆಪಟ್ಟರೆ ಅವನು ಲಭಿಸುತ್ತಾನೆ." "ಒಬ್ಬ ಹುಡುಗ ಪ್ರಾಪ್ತವಯಸ್ಕನಾಗುವ ಮೊದಲೇ ತನಗೆ ಆಸ್ತಿಯಲ್ಲಿ ಪಾಲು ಬೇಕು ಎಂದು ಬಹಳವಾಗಿ ಹಠ ಮಾಡಿದರೆ, ತಾಯ್ತಂದೆಯರು ಹಠವನ್ನು ತಡೆಯಲಾರದೆ, ಅವನ ಪಾಲಿನ ಆಸ್ತಿಯನ್ನು ಬರೆದುಕೊಟ್ಟು ಬಿಡುವುದಿಲ್ಲವೇ? ಹಾಗೆಯೇ ವ್ಯಾಕುಲತೆಯಿಂದ ನಾವು ದೇವರನ್ನು ದರ್ಶನಕ್ಕಾಗಿ ಕಾಡುತ್ತಿದ್ದರೆ ಅವನು ಬಂದು ದರ್ಶನವನ್ನು ನೀಡಲೇಬೇಕು." ಪ್ರಾಮಾಣಿಕವಾದ ವ್ಯಾಕುಲತೆಯಿದ್ದಲ್ಲಿ ಒಂದು ವೇಳೆ ಸಾಧನೆಯ ಹಾದಿಯಲ್ಲಿ ನಾವು ದಾರಿ ತಪ್ಪಿದರೂ, ಭಗವಂತನೇ ಯಾವುದಾದರೊಂದು ಉಪಾಯದಿಂದ ನಮ್ಮನ್ನು ಸರಿದಾರಿಯಲ್ಲಿ ಮುನ್ನಡೆಸಿಕೊಂಡು ಹೋಗುತ್ತಾನೆ. ಆಧ್ಯಾತ್ಮಿಕ ಜೀವನದ ಪೂರಕ ಅಂಶಗಳಲ್ಲಿ ವ್ಯಾಕುಲತೆಯೇ ಪ್ರಧಾನವಾದುದೆನ್ನುವುದರಲ್ಲಿ ಎರಡು ಮಾತೇ ಇಲ್ಲ.

**ಆಧ್ಯಾತ್ಮಿಕ ಜೀವನದ ಮಾರಕ ಅಂಶಗಳು**

ಸಾಧಕನಾದವನು ಆಧ್ಯಾತ್ಮಿಕ ಜೀವನದ ಪೂರಕ ಅಂಶಗಳನ್ನು ಮೈಗೂಡಿಸಿಕೊಳ್ಳುತ್ತಾ, ಜೊತೆಜೊತೆಯಲ್ಲಿಯೇ ಅದಕ್ಕಿರುವ ಮಾರಕ ಅಂಶಗಳನ್ನೂ ತನ್ನೊಳಗಿನಿಂದ ತೆಗೆದುಹಾಕುವ ಪ್ರಯತ್ನವನ್ನು ಮಾಡಲೇಬೇಕಾಗುತ್ತದೆ. ದೋಣಿಯನ್ನು ಗೂಟಕ್ಕೆ ಕಟ್ಟಿ ಹಾಕಿ ಎಷ್ಟೇ ಹುಟ್ಟು ಹಾಕಿದರೂ ದೋಣಿ ಮುನ್ನಡೆಯುವುದಿಲ್ಲ. ಆದ್ದರಿಂದ ಸಾಧನಾಪಥದ ಗೂಟದಂತಿರುವ ಮಾರಕಾಂಶಗಳನ್ನು ನಾವು ತೊಡೆದುಹಾಕಲೇಬೇಕಾಗುತ್ತದೆ.

**ಕಾಮಕಾಂಚನವೇ ಮಾಯೆ:** "ಕಾಮಕಾಂಚನದ ಮೇಲೆ ನಾನು ಉಗುಳುತ್ತೇನೆ. ಸಾವಿರ ಸಲ ಉಗುಳುತ್ತೇನೆ. ಕಾಮಕಾಂಚನಕ್ಕೆ ವಶರಾದವರು ಯಾವತ್ತೂ ಭಗವಂತನನ್ನು ಪಡೆಯಲಾರರು" ಎನ್ನುತ್ತಾರೆ ಶ್ರೀರಾಮಕೃಷ್ಣರು. "ಬ್ರಹ್ಮವಿಷ್ಣುಗಳೆಲ್ಲ ಮೂರ್ಛಿತರಾಗಿ ಸಂದರು ಮಾಯೆಗೆ, ಇನ್ನು ಸಾಮಾನ್ಯ ಜನರ ಪಾಡೇನು? ಅವರಿಗೆ ಎಲ್ಲಿದೆ ಬಿಡುಗಡೆ?" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಕಾಮಕಾಂಚನವೆಂಬ ಮಾಯೆಯ ಬಿಗಿಮುಷ್ಟಿಯಿಂದ ಪಾರಾಗಲು, ಶ್ರೀರಾಮಕೃಷ್ಣರೇ ಹೇಳಿಕೊಟ್ಟಂತೆ, ಯಾವಾಗಲೂ ಸದ್ವಿಚಾರ ಮಾಡುತ್ತಿರಬೇಕು; "ಪ್ರಭು, ನಿನ್ನ ಭುವನಮೋಹಿನೀ ಮಾಯೆಯಿಂದ ನನ್ನನ್ನು ಮೋಸಗೊಳಿಸಬೇಡ" ಎಂದು ಪ್ರಾರ್ಥಿಸುತ್ತಿರಬೇಕು.

ಕಾಮಕಾಂಚನಕ್ಕೆ ವಶನಾಗದಿರಲು ಸಾಧಕನಲ್ಲಿ ಇಂದ್ರಿಯನಿಗ್ರಹ ಇರಬೇಕು. "ಆನೆಯನ್ನು ಬಿಟ್ಟರೆ ಅದು ಗಿಡಮರಗಳನ್ನು ಉರುಳಿಸುತ್ತ ಹೋಗುವುದು. ಆದರೆ, ಮಾವಟಿಗ ಅದರ ಮೇಲೆ ಅಂಕುಶವನ್ನು ಪ್ರಯೋಗಿಸಿದೊಡನೆಯೇ ಅದು ಸುಮ್ಮನಾಗುವುದು. ಹಾಗೆಯೇ ನಿಗ್ರಹವಿಲ್ಲದ ಮನಸ್ಸು ಎಲ್ಲೆಲ್ಲಿಯೋ ಹೋಗುತ್ತದೆ. ವಿವೇಕವೆಂಬ ಅಂಕುಶವನ್ನು ಹಾಕಿದಾಗ ಇಂದ್ರಿಯ–ಮನಸ್ಸುಗಳು ಹಿಡಿತಕ್ಕೆ ಬರುತ್ತವೆ" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಮಾಯೆಯಿಂದ ಪಾರಾಗಲು ಪ್ರಾರ್ಥನೆ ಬೇಕು, ದೃಢನಿರ್ಧಾರ ಬೇಕು, ವಿವೇಕ–ವಿಚಾರ ಬೇಕು. ಎಲ್ಲಕ್ಕಿಂತ ಮಿಗಿಲಾಗಿ ಭಗವಂತನ ಕೃಪೆ ಬೇಕೇಬೇಕು. ಶ್ರೀರಾಮಕೃಷ್ಣರು ಹೇಳುತ್ತಾರೆ, "ಈ ಜಗತ್ತು ಮಿಥ್ಯೆ, ಕಾಮ–ಕಾಂಚನಗಳೆಲ್ಲ ಕೇವಲ ಭ್ರಮೆ ಎಂಬ ನಂಬಿಕೆ ನಮ್ಮೊಳಗೆ ಅಷ್ಟು ಸುಲಭವಾಗಿ ಬಂದುಬಿಡುತ್ತದೆಯೆ? ಮನುಷ್ಯನ ಶಕ್ತಿ ಎಷ್ಟು ಅಲ್ಪ! ಈ ಅಲ್ಪಶಕ್ತಿಯಿಂದ ಅವನು ಮಾಡುವ ಪ್ರಯತ್ನವೂ ಅಲ್ಪ ತಾನೆ? ಹೀಗಾಗಿ ಭಗವಂತನ ಕೃಪೆಯಿಲ್ಲದೆ ಅದೆಲ್ಲ ಹೇಗೆ ಸಾಧ್ಯ?"

**ಅಳಿಯಾಸೆಗಳ ತೊರೆದು ಹರಿಯ ಸ್ತುತಿಸು:** ಆಸೆಗಳಿಂದ ಬಂಧಿತನಾದ ವ್ಯಕ್ತಿಗೆ ಭಗವದನುರಾಗ ಒದಗಿ ಬರಲಾರದು. ಆಶಾಪಾಶಗಳಿಂದ ಬದ್ಧನಾದ ವ್ಯಕ್ತಿ, ಜಗತ್ತನ್ನು ಯಾವಾಗಲೂ ರಾಗದ್ವೇಷಗಳ ದೃಷ್ಟಿಯಿಂದಲೇ ನೋಡುತ್ತ, ಕಾಮಕ್ರೋಧಗಳಿಗೆ ಸಿಲುಕಿ ಅತೃಪ್ತನಾಗಿರುತ್ತಾನೆ. ಶ್ರೀರಾಮಕೃಷ್ಣರು ಹೇಳುತ್ತಾರೆ, "ತಕ್ಕಡಿಯಲ್ಲಿ ಭಾರವಾಗಿರುವ ತಟ್ಟೆ ಕೆಳಕ್ಕೆ ಹೋಗುತ್ತದೆ, ಭಾರವಿಲ್ಲದುದು ಮೇಲಕ್ಕೆ ಬರುತ್ತದೆ. ಹಾಗೆಯೇ ಭಾರ ಇರುವವನ ಮನಸ್ಸು ಕೆಳಮುಖವಾಗಿಯೇ ಹರಿಯುತ್ತಿರುತ್ತದೆ. ಆಸೆ–ಆಕಾಂಕ್ಷೆಗಳ ಭಾರ ಕಡಿಮೆ ಇರುವವನ ಮನಸ್ಸು ಭಗವಂತನ ಪಾದಪದ್ಮಗಳೆಡೆಗೆ ಹರಿಯುತ್ತದೆ." ಆಸೆಗಳೆಂಬ ಗಾಳಿಯಿಂದಲೇ ಚಿತ್ತಸರೋವರವು ಕಲಕಿ ಅದರ ಬುಡದಲ್ಲಿರುವ ಭಗವಂತನ ದರ್ಶನವಾಗುವುದಿಲ್ಲ. ಆಸೆಗಳಿಂದ ಪಾರಾಗದೆ ವ್ಯಕ್ತಿ ಸರಳನಾಗುವುದಿಲ್ಲ, ಕುಟಿಲನಾಗುತ್ತಾನೆ. ವ್ಯಕ್ತಿ ಸರಳನಾಗದೆ ಅವನ ಮನಸ್ಸಿನಲ್ಲಿ ಹೊಕ್ಕ ಆಧ್ಯಾತ್ಮಿಕ ಬೋಧನೆ ಫಲಕಾರಿಯಾಗದು. ಪತ್ನಿ, ಪುತ್ರ, ಶರೀರ ಸೌಂದರ್ಯ, ಲೋಕಮಾನ್ಯತೆ, ಪ್ರತಿಷ್ಠೆಗಳ ಆಸೆ ಮಾತ್ರವಲ್ಲ, ಪಾಂಡಿತ್ಯದ ಆಸೆಯೂ ವ್ಯಕ್ತಿಯನ್ನು ಭಗವಂತನಿಂದ ವಿಮುಖವಾಗಿಸಬಲ್ಲದು. ಆಳವಾದ ಬಾವಿಯ ಅಂಚಿನಲ್ಲಿ ನಿಂತಿರುವ ವ್ಯಕ್ತಿ ಎಲ್ಲಿ ತಾನು ಅದರೊಳಗೆ ಬೀಳುತ್ತೇನೆಯೋ ಎಂದು ಜಾಗರೂಕನಾಗಿರುವಂತೆ,